ಪರಿವರ್ತಿಸು. ಹಿಂಸೆ-ಬಲಿಯಿಂದ ಪ್ರಕೃತಿಯ ವಿಪತ್ತು ದೂರವಾಗುವುದಿಲ್ಲ! ಎಲ್ಲ ರೀತಿಯ ಹಿಂಸೆಯಿಂದ ದೂರಸರಿ. ಪ್ರಕೃತಿಗೆ ತಲೆಬಾಗಿ ನಡೆ. ಯಾರ ಮೇಲೂ ಬಲ ಪ್ರಯೋಗ ಮಾಡಬೇಡ. ನಿನ್ನ ರಾಜ್ಯದ ಒಕ್ಕಲು ಮಕ್ಕಳ ಮಾತನ್ನು ಕಿವಿಗೊಟ್ಟು ಕೇಳು. ಕರುಣೆ ಮತ್ತು ದಯೆ ನಿನ್ನ ಆಡಳಿತದಲ್ಲಿ ಆಳವಾಗಿ ಬೇರೂರಲಿ.

ನಿನ್ನ ರಾಜ್ಯದಲ್ಲಿ ಹಸಿದಿರುವ ಕಟ್ಟಕಡೆಯ ವ್ಯಕ್ತಿಗೂ ಅನ್ನ ಸಿಗುವಂತೆ ಭಗವಾನರು ಕರುಣಿಸಿದ ಈ ಅಕ್ಷಯಪಾತ್ರೆ ನೋಡಿಕೊಳ್ಳುತ್ತದೆ. ಹಸಿವಿನಿಂದ ಬರುವವರಿಗೆಲ್ಲಾ ಇದರಿಂದ ಅನ್ನವನ್ನು ಮೊಗೆದುಕೊಡು. ಈ ಪಾತ್ರೆ ಎಂದಿಗೂ ಬರಿದಾಗದು! ಈ ಅಕ್ಷಯ ಪಾತ್ರೆಯಿಂದ ಹಸಿದವರು, ಪಶು-ಪಕ್ಷಿಗಳು ಉಂಡು ಸುಖವಾಗಿರಲಿ' ಎಂದು ಹೇಳಿ ತನ್ನ ಕೈಲ್ಲಿದ್ದ ಅಮೃತಸುರಭಿ ಅಕ್ಷಯಪಾತ್ರೆಯನ್ನು ರಾಜನ ಕೈಗಿತ್ತಳು.

ಮಣಿಮೇಕಲೆಯ ಮಾತುಗಳನ್ನು ಕೇಳಿದ ಮೇಲೆ ಅವನಿಗೆ ಒಂದು ಬಗೆಯ ಆತಂಕ, ಭಯ ಉಂಟಾಯಿತು. ಅವಳ ಮಾತನ್ನು ಒಪ್ಪಲು ಅವನ ಮನಸ್ಸು ಹಿಂದೇಟು ಹಾಕುತ್ತಿತ್ತು. ಆದರೂ ಅವಳ ಮಾತುಗಳನ್ನು ನಿರಾಕರಿಸುವಂತೆಯೂ ಇರಲಿಲ್ಲ! ಹತ್ತಾರು ಸಲ ಯೋಚಿಸಿದ ಮೇಲೆ ಮಣಿಮೇಕಲೆಯ ಮಾತುಗಳನ್ನು ಅವನ ಮನಸ್ಸು ಒಪ್ಪಿಕೊಂಡಿತು. 'ಇದೆಲ್ಲವೂ ಎಲ್ಲಿಗೆ ಹೋಗಿ ನಿಲ್ಲುತ್ತದೋ ನಿಲ್ಲಲಿ! ಯಾರೇ ವಿರೋಧ ತೋರಿದರೂ ನಾನಂತೂ ಮಣಿಮೇಕಲೆ ಹೇಳಿದ ಎಲ್ಲ ಮಾತುಗಳನ್ನೂ ನೆರವೇರಿಸುತ್ತೇನೆ' ಎಂದು ತನ್ನೊಳಗೆ ನಿರ್ಧರಿಸಿದ.

ಒಂದು ದಿನ ಸಂಜೆ, ಆ ದುಃಖಭರಿತ ದಿನಗಳನ್ನು ಮರೆಮಾಡುತ್ತಾ ತೆಂಕಣದಿಂದ ಮಳೆ ಹಾಡೊಂದು ತೇವಭರಿತವಾಗಿ ಕೇಳಿಬಂದಿತು. ದಟ್ಟವಾದ ಮಳೆಮೋಡಗಳು ಯಾರ ಅನುಮತಿಯಿಲ್ಲದೆ ಕಾಂಚೀಪುರವನ್ನು ಹಿತಕರವಾಗಿ ಸುತ್ತುವರೆದವು.

ಬಹಳ ದಿನಗಳ ನಂತರ
ಭೂಮಿಯೊಳಗೆ ಏನೋ ಹರಿದಂತಾಯಿತು
ಮುಚ್ಚಿಹೋದ ಒರತೆಗಳು ಕಣ್ಣು ತೆರೆದವು
ಬತ್ತಿದ ಬೇರುಗಳ ಬಳಿಗೆ ನೀರು ಹರಿದುಬಂದಿತು
ಈ ಹಾಡು ಮಳೆಯ ಹೆಜ್ಜೆಗಳ ಗೆಲುವನ್ನು ಹೇಳಿತು
ಹಳೆಯ ದಿನಗಳು ಉರುಳಿ, ಹೊಸ ಕ್ಷಣಗಳು ಉದಯಿಸುವುದನ್ನು ಹೇಳಿತು
ಗಿಡ-ಮರಗಳು ಚಿಗುರಿದವು, ಬತ್ತಿದ ಕಾಲುವೆಗಳು ತುಂಬಿ ಹರಿದವು
ಮಕ್ಕಳ, ಹೆಂಗಸರ, ಹಕ್ಕಿಗಳ ಕಲರವದಿಂದ ನೆಲ ಚಿಗರತೊಡಗಿತು
ಎಲ್ಲ ಋತುಗಳೂ ಒಂದರ ಹಿಂದೆ ಒಂದರಂತೆ
ಬಂದವು ಕಾಂಚೀಪುರದ ತುರುಬಿಗೆ

ಮಣ್ಣಿನ ಬಿರುಕಿನಲ್ಲಿ, ಬಂಡೆಗಳ ಸಿದಿಲುಗಳಲ್ಲಿ, ಬಂಜೆ ಮೋಡಗಳ ಒಡಲಲ್ಲಿ ಅವಿತ್ತಿದ್ದ ರಕ್ಕಸರು, ಆವಿಗೆಯಲ್ಲಿ ಬೇಯುವ ಸ್ವಾರೆಗಳಂತಾದರು. ಸತ್ತ ದನಗಳ ಕೊಂಬಿನ ಮೇಲೆ ಬಂದಿದ್ದ ಅವರೆಲ್ಲ, ಕಾಂಚೀಪುರದಲ್ಲಿ ಇನ್ನು ನಮಗೆ ತಾವಿಲ್ಲ. ಎಂದು ಅರಿತರು. ಇದ್ದಕ್ಕಿದ್ದಂತೆ ಒಂದು ದೊಡ್ಡ ದೂಳಿನ ಹೊಗೆಕಂಬ ಆಕಾಶಕ್ಕೆ ಚಿಮ್ಮಿತು. ಆ ದೂಳಿನ ಕಂಬದೊಳಗೆ ಅವರೆಲ್ಲ ಕರಗಿ ಹೋದರು. ಮತ್ತೆ ಆಕಾಶ ನೀಲಿ ಬಣ್ಣದಿಂದ ಹೊಳೆಯುತ್ತಿತ್ತು.

ಮುಂದೊಂದು ದಿನ:
ಕಾಂಚೀಪುರ ಬೀಳ್ಕೊಟ್ಟಿತು ಮಣಿಮೇಕಲೆಯನ್ನು
ಅನ್ನವಿರದ ಇನ್ನೊಂದು ನಾಡಿಗೆ
ಎಳೆಗೂಸುಗಳು ಬಾಣಂತಿಯರು ಹಸಿದಿರುವ
ಜೋಪಡಿಗೆ
ಮಳೆಯ ಮೋಡಗಳೊಡನೆ

ತೃಪ್ತಿಯ ಮುಗುಳುನಗೆ ಸುಕ್ಕುಗಟ್ಟಿದ ಕಾಂಚೀಪುರದ ತುಟಿಯಮೇಲೆ ಬೆಳ್ಳಿಗೆರೆಯಂತೆ ಮಿನುಗಿತು. ಮಣಿಮೇಕಲೆ ಮುಂದೆ ನಡೆಯುತ್ತಿದ್ದಾಗ, ಕಾಂಚೀಪಟ್ಟಣವು ನಿಧಾನವಾಗಿ ಅವಳ ಬಳಿಗೆ ಬಂದು ನಡುಬಾಗಿ:

'ಹೋಗಿ ಬಾ ತಾಯಿ. ಬಡವರ ಮಗಳು ನೀನು, ಅನಾಥರ ಮಗಳು ನೀನು. ನೀನು ನಡೆದಾಡಿದ ದಾರಿಯಲ್ಲಿ ಜಲದೇವತೆಯರು ಉಕ್ಕಿ ಹರಿಯಲಿ. ಅನ್ನದೇವತೆ ಕಾಲೂರಿ ನೆಲೆಗೊಳ್ಳಲಿ. ಹೋಗಿ ಬಾ ತಾಯಿ' ಎಂದು ಹೇಳಿತು.

ಆಗ ಬಂಗಾರದ ಬಣ್ಣದ ಸಂಜೆಯ ಹೊನಲು ಮಣಿಮೇಕಲೆಯ ಮೇಲೆ ಥಳ ಥಳಿಸುತ್ತಿತ್ತು. ಆ ಬೆಳಕಿಗೆ ಮಣಿಮೇಕಲೆ ಕಡೆದ ಹೊನ್ನಿನ ಪುತ್ಥಳಿಯಂತೆ ಕಾಣುತ್ತಿದ್ದಳು.

●